ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No:0821-2417107

**CHAMUNDESHWARI ELECTRICITY SUPPLY CORPORATION LIMITED**
*(A Government of Karnataka Undertaking)*
Corporate Office,
CESC, Mysuru-570017
**Web Site: www.cescmysore.org.**
E-mail ID: gmtech@cescmysore.org

Company Identity Number[CIN]:- **U40109KA2004SGC035177**

**ಸಂಖ್ಯೆ: ಚಾವಿಸನಿನಿ/ಪ್ರವ್ಯ(ತಾ)/ಉಪ್ರವ್ಯ(ಎಂಐಎಸ್)/ಸಪ್ರವ್ಯ-2/ವ್ಯ/22-23/** CYS-434 **ದಿನಾಂಕ:** 30 JUN 2022

ಮುಖ್ಯ ಇಂಜಿನಿಯರ್ (ವಿ),
ಕಾರ್ಯ ಮತ್ತು ಪಾಲನಾ ವಲಯ,
ಚಾವಿಸನಿನಿ, ಮೈಸೂರು.

ಮಾನ್ಯರೇ,

**ವಿಷಯ: 220/66 ಕೆವಿ ಕಡಕೊಳ ಕೇಂದ್ರದಲ್ಲಿರುವ 100 ಎಂವಿಎ ಸಾಮರ್ಥ್ಯದ ಶಕ್ತಿ ಪರಿವರ್ತಕ-01 ರ ನಿರ್ವಹಣಾ ಕಾಮಗಾರಿಗಳನ್ನು ನಿರ್ವಹಿಸಲು ಮಾರ್ಗಮುಕ್ತತೆ ಪಡೆಯಲು ಅನುಮೋದನೆ ನೀಡುವ ಬಗ್ಗೆ.**

**ಉಲ್ಲೇಖ:** 1. ಮುಇಂ(ವಿ)/ಅಇಂ(ವಿ)/ಸಇಂ(ಕ)-1/2022-23/1973-75 ದಿನಾಂಕ:21.06.2022.
2. ನಿರ್ದೇಶಕರು(ತಾಂತ್ರಿಕ)ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಸಭಾ ನಡಾವಳಿ: 29.06.2022.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 220/66 ಕೆವಿ ಕಡಕೊಳ ಸ್ವೀಕರಣಾ ಕೇಂದ್ರದ 2 ಸಂಖ್ಯೆಯ 100 ಎಂವಿಎ ಸಾಮರ್ಥ್ಯದ ಶಕ್ತಿ ಪರಿವರ್ತಕಗಳ ಐಡಾಕ್ಸ್ ಪರೀಕ್ಷೆ ಫಲಿತಾಂಶದ ಪ್ರಕಾರ ತೈಲದ ತೇವಾಂಶವು ನಿಗದಿತ ಪರಿಮಿತಿಗಿಂತ ಹೆಚ್ಚು ಇರುವುದರಿಂದ ತೈಲ ಶುದ್ಧಿಕರಣದ ಅಗತ್ಯತೆ ಇರುವುದಾಗಿ ಆರ್&ಡಿ, ಬೆಂಗಳೂರು ರವರು ವರದಿ ನೀಡಿರುವುದರಿಂದ ಸದರಿ ವಿಷಯದ ಕಾಮಗಾರಿಯನ್ನು ಕೈಗೊಳ್ಳಲು, ಮಾರ್ಗಮುಕ್ತತೆ ಪಡೆಯಲು ಸಹಮತ ನೀಡುವಂತೆ ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಕವಿಪ್ರನಿನಿ, ಮೈಸೂರು ರವರು ಕೋರಿರುತ್ತಾರೆಂದು ತಿಳಿಸಿರುತ್ತೀರಿ.

ಮುಂದುವರೆದು, ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಕವಿಪ್ರನಿನಿ, ಮೈಸೂರು ರವರು 220/66 ಕೆವಿ ಕಡಕೊಳ ಸ್ವೀಕರಣಾ ಕೇಂದ್ರದಲ್ಲಿ ಎರಡು ಸಂಖ್ಯೆ 100 ಎಂವಿಎ ಶಕ್ತಿ ಪರಿವರ್ತಕಗಳಿದ್ದು, ಪ್ಯಾರಲಲ್ ಅಪರೇಷನ್ ವ್ಯವಸ್ಥೆಯಲ್ಲಿ ಎಲ್ಲಾ 66 ಕೆವಿ ಮಾರ್ಗಗಳಿಗೆ ಮತ್ತು 2*12.5 ಎಂವಿಎ ಪರಿವರ್ತಕಗಳಿಗೆ ವಿದ್ಯುತ್ ಪೂರೈಕೆಯಾಗುತ್ತಿದ್ದು, ಸದರಿ ಕಾಮಗಾರಿ ನಿರ್ವಹಣೆಗೆ ಎರಡು ಶಕ್ತಿ ಪರಿವರ್ತಕಗಳನ್ನು ಒಂದೇ ಬಾರಿಗೆ ಶಟ್ ಡೌನ್ ಮಾಡಿಕೊಡುವುದು ತಾಂತ್ರಿಕವಾಗಿ ಸಾಧ್ಯವಿರದ ಕಾರಣ ಒಂದು ಬಾರಿಗೆ ಒಂದೊಂದೇ (One by one) ಶಕ್ತಿ ಪರಿವರ್ತಕದ LC ಪಡೆದು ಕಾಮಗಾರಿಯನ್ನು ನಿರ್ವಹಿಸಲು ಉದ್ದೇಶಿಸಲಾಗಿರುತ್ತದೆ ಹಾಗೂ 100 ಎಂವಿಎ ಶಕ್ತಿ ಪರಿವರ್ತಕಗಳ ಸದರಿ ಕಾಮಗಾರಿಗಳನ್ನು ಕೋವಿಡ್ ಕಾರಣಗಳಿಂದಾಗಿ 2017 ರಿಂದಲೂ ನಿರ್ವಹಿಸಲು ಸಾಧ್ಯವಾಗಿರುವುದಿಲ್ಲ. ಪರಿವರ್ತಕಗಳ ಸುರಕ್ಷತಾ ದೃಷ್ಟಿಯಿಂದ ಮುನ್ನೆಚ್ಚರಿಕೆ ಕ್ರಮವಾಗಿ ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಲೇಬೇಕಾದ ಅನಿವಾರ್ಯತೆ ಇರುತ್ತದೆ. ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸರಿಸುಮಾರು ಒಂದು ತಿಂಗಳು (ಪ್ರತಿ ಶಕ್ತಿ ಪರಿವರ್ತಕಕ್ಕೆ 15 ದಿನಗಳು) ಬೇಕಾಗಿರುತ್ತದೆ ಹಾಗೂ ಸದರಿ ಕಾಮಗಾರಿಯನ್ನು ನಿರ್ವಹಿಸುವ ಸಂದರ್ಭದಲ್ಲಿ ಕಡಕೊಳ ಸ್ವೀಕರಣ ಕೇಂದ್ರಕ್ಕೆ ಜೋಡಿಸಲ್ಪಟ್ಟಿರುವ (Down stream) ವಿ.ವಿ.ಕೇಂದ್ರಗಳಿಗೆ ಬದಲಿ ವಿದ್ಯುತ್ ವ್ಯವಸ್ಥೆ ಮಾಡಲಾಗುವುದೆಂದು ತಿಳಿಸಿರುತ್ತೀರಿ.

ಈ ಸಂಬಂಧ ದಿನಾಂಕ 28.06.2022 ರಂದು ನಿರ್ದೇಶಕರು(ತಾಂತ್ರಿಕ)ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ **220/66 ಕೆವಿ ಕಡಕೊಳ ಸ್ವೀಕರಣಾ ಕೇಂದ್ರದ 1 ಸಂಖ್ಯೆಯ 100 ಎಂವಿಎ ಸಾಮರ್ಥ್ಯದ ಶಕ್ತಿ ಪರಿವರ್ತಕದ ಶಟ್‌ಡೌನ್ ಪಡೆಯಲು** ದಿನಾಂಕ **04.07.2022** ರಿಂದ **18.07.2022** ರವರೆಗೆ ಅನುಮೋದನೆ ನೀಡಲಾಗಿರುತ್ತದೆ.

ಈ ನಿಟ್ಟಿನಲ್ಲಿ, ಸಂಬಂಧಪಟ್ಟ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ... ಹಾಗೂ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿ ರವರು, ಮಾರ್ಗಮ... ದಿನದಂದು ಐ.ಪಿ ಸ್ಥಾವರಗಳಿಗೆ ಬದಲಾದ ಸಮಯದಲ್ಲಿ ವಿದ್ಯುತ್ ಪೂರೈಸುವಂತೆ ಕ್ರಮ ವಹಿಸಲು, ಕೋವಿಡ್ ... ಸೆಂಟರ್ ಆಸ್ಪತ್ರೆಗಳಿಗೆ ಬದಲಿ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡಲು ಹಾಗೂ ಗ್ರಾಹಕರುಗಳಿಗೆ ವಿದ್ಯುತ್ ವ್ಯತ್ಯಯ... ಮಾಹಿತಿಯನ್ನು ಮುಂಚಿತವಾಗಿ ಪತ್ರಿಕಾ ಪ್ರಕಟಣೆಯ ಮೂಲಕ ತಲುಪಿಸಲು ಮತ್ತು ಸದರಿ ದಿನಾಂಕದಂದು ಕೇಂದ್ರ ಸ್ಥಾನದಲ್ಲೇ ಇದ್ದು ಕೆ.ಪಿ.ಟಿ.ಸಿ.ಎಲ್ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಲೋಡ್ ಮಾನಿಟರಿಂಗ್ ಮಾಡುವಂತೆ ಸೂಚಿಸಲು ನಿರ್ದೇಶಿಸಲ್ಪಟ್ಟಿರುತ್ತೇನೆ.

ತಮ್ಮ ವಿಶ್ವಾಸಿ,

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),
ಚಾವಿಸನಿನಿ, ಮೈಸೂರು

**ಪ್ರತಿಗಳು :**

1. ಮುಖ್ಯ ಇಂಜಿನಿಯರ್(ವಿ), ವಲಯ ಕಛೇರಿ, ಮೈಸೂರು, ಚಾ.ವಿ.ಸ.ನಿ.ನಿ.
2. ಮುಖ್ಯ ಇಂಜಿನಿಯರ್(ವಿ), ಪ್ರಸರಣಾ ವಲಯ, ಮೈಸೂರು, ಕ.ವಿ.ಪ್ರ.ನಿ.ನಿ.
3. ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ, ಮೈಸೂರು.
4. ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ನಿ ವೃತ್ತ, ಕ.ವಿ.ಪ್ರ.ನಿ.ನಿ, ಮೈಸೂರು.
5. ಕಾರ್ಯನಿರ್ವಹಕ ಇಂಜಿನಿಯರ್ (ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ, ಎನ್.ಆರ್ ಮೊಹಲ್ಲಾ/ ವಿ.ವಿ.ಮೊಹಲ್ಲಾ/ ನಂಜನಗೂಡು.
6. ಕಾರ್ಯನಿರ್ವಹಕ ಇಂಜಿನಿಯರ್(ವಿ),ಟಿಎಲ್&ಎಸ್ಎಸ್, ಕ.ವಿ.ಪ್ರ.ನಿ.ನಿ, ಹೂಟಗಳ್ಳಿ.
7. ಸಹಾಯಕ ಕಾರ್ಯನಿರ್ವಹಕ ಇಂಜಿನಿಯರ್(ವಿ), ಡಿ.ಸಿ.ಸಿ, ಚಾ.ವಿ.ಸ.ನಿ.ನಿ, ಮೈಸೂರು.
8. ಆಪ್ತ ಸಹಾಯಕರು, ವ್ಯನಿ ಇದನ್ನು ಮಾನ್ಯ ವ್ಯನಿ ರವರ ದಯಾಪರ ಗಮನಕ್ಕೆ ತರಲು ಕೋರಲಾಗಿದೆ.

ಕಛೇರಿ ಪ್ರತಿ/ಮುಖ್ಯ ಕಡತ.